ಸುಮಾರು ಹದಿನೈದು ನಿಮಿಷಗಳಾದರೂ ಕಳೆದಿರಬೇಕು. ಬೋಪಯ್ಯನೂ ಆಕಳಿಸಲುತೊಡಗಿದ.

ಅಷ್ಟರಲ್ಲಿ ಬಾಗಿಲ ಬಳಿ ನೆರಳಾಡಿತು. ಕರಮಚಂದ ಕೊನೆಗೂ ಹಿಂದಿರುಗಿದ್ದ.

"ಬೋಪಯ್ಯ, ನಮ್ಗೆ ಮನೆ ಇಷ್ಟವಾಗಿದೆ. ನಿಮ್ಮ ಕೋಣೆಯಲ್ಲಿ ಕುಳಿತು, ವ್ಯವಹಾರ ಕುದುರಿಸೋಣವೇ?"

ಚಿನ್ನಪ್ಪ ಮಾತ್ರ ಕರಮಚಂದನ ನುಡಿಗಳಿಗೆ ಗಮನ ಕೊಡದೆ, ಸ್ಥಿತಪ್ರಜ್ಞನಂತೆ ಟೀವಿ ವೀಕ್ಷಣೆ ಮುಂದುವರೆಸಿದ್ದ.

ನಾವು ಬೋಪಯ್ಯನ ಕೋಣೆಯತ್ತ ನಡೆದೆವು. ಬೋಪಯ್ಯನ ಮೊಗದಲ್ಲಿ ಕರಮಚಂದನ ವಿಲಕ್ಷಣ ವರ್ತನೆಯಿಂದ ಚಿಂತೆ ಮೂಡಿದ್ದು ಕಾಣಿಸುತ್ತಿತ್ತು.

"ಕರಮಚಂದ, ಮೂತ್ರಶಂಕೆಗೆ ಬಹಳ ಸಮಯ ತೆಗೆದುಕೊಂಡೆ!" ನಾನು ಆಕ್ಷೇಪಿಸಿದೆ.

ಅದನ್ನು ನಿರ್ಲಕ್ಷಿಸಿ, ಕರಮಚಂದ ಜೇಬಿನಿಂದ ಒಂದು ಬಟ್ಟೆಯ ಚೀಲ ತೆಗೆದು, ಬೋಪಯ್ಯನ ಮುಂದೆ ಹಿಡಿದ,

"ನೋಡಿ, ನಿಮ್ಮ ವಜ್ರಗಳೆಲ್ಲಾ ಸರಿಯಾಗಿ ಇವೆಯಾ?"

ಬೋಪಯ್ಯ ಅತೀವ ಅಚ್ಚರಿಯಲ್ಲಿ ಬಾಯಿ ಅಗಲಿಸಿದ. ಆತುರಾತುರವಾಗಿ ಚೀಲದಲ್ಲಿದ್ದ ವಸ್ತುಗಳನ್ನು ಪರಿಶೀಲಿಸಿದ ಆತ ಸಂತೃಪ್ತಿಯ ನಗು ಬೀರಿದ.

"ಇದೆಲ್ಲಿ ಸಿಕ್ತು, ಸಾರ್? ನೀವು ಮ್ಯಾಜಿಕ್ ಮಾಡಿದ್ರಾ?"

"ಇದು ನಿಮ್ಮ ಮನೆ ಪಕ್ಕದಲ್ಲಿರೋ ಎಣ್ಣೆಗೂಡಲ್ಲಿ ಸಿಕ್ತು! ಗೊತ್ತಾಯ್ತೇ? ಹಳೆಯ ಷೆಡ್‌ನಲ್ಲಿ. ಚಿನ್ನಪ್ಪ ಅಲ್ಲಿ ನಿತ್ಯ ಎಣ್ಣೆ ಹಾಕ್ತಿರಬೇಕು. ಸಾಕಷ್ಟು ಖಾಲಿ ಬಾಟಲಿಗಳು ಅಲ್ಲಿ ಬಿದ್ದಿವೆ. ನಿತ್ಯ ಕುಡಿಯುವ ಕುರುಹುಗಳಿವೆ. ಬಿದ್ದಪ್ಪ, ಇದನ್ನು ಅಲ್ಲಿ ಹುಡುಕಲು ಸ್ವಲ್ಪ ಸಮಯ ಬೇಕಾಯ್ತು. ಹಾಗಾಗಿ ತಡವಾಯಿತು."

"ಹಾಂ, ನಾವೂ ಅದ್ಕೆ ಎಣ್ಣೆಗೂಡು ಅಂತಲೇ ಹೇಳುವುದು. ಚಿನ್ನಪ್ಪ ನಿತ್ಯ ಅಲ್ಲಿ ಕೂತು ಬಾಟಲಿ ಬಗ್ಗಿಸ್ತಾನೆ. ಆದರೆ, ವಜ್ರಗಳು ಅಲ್ಲಿವೆ ಅಂತ ನಿಮ್ಗೆ ಗೊತ್ತಾಗಿದ್ದು ಹೇಗೆ?"

"ನಾವು ಅವ್ನ ಕೋಣೆಗೆ ಹೋಗುವಾಗ, ಚಿನ್ನಪ್ಪ ದುಡು ದುಡು ಅಂತ ಮೆಟ್ಟಲಿಳಿದು ಬಂದಿದ್ದ, ಅಲ್ವೇ? ನಂತರ ಅವ್ನ ಕೋಣೆಯಲ್ಲಿ ಹುಡುಕುತ್ತಿರುವಾಗ, ಚಿನ್ನಪ್ಪ ಎಣ್ಣೆಗೂಡಿನತ್ತ ಧಾವಿಸುವುದನ್ನು ಕಂಡೆ. ಆಗಲೇ ಅನುಮಾನವಾಯ್ತು. ಯಾಕೆ ಗೊತ್ತೆ? ಅವ್ನ ಹೆಂಡ್ತಿ ಸವಿ ಧರಿಸಿದ್ದ ತುಸು ದೊಡ್ಡದಾದ ಸೆಲ್ವಾರ್! ಗಡಿಬಿಡಿಯಲ್ಲಿ ತಂಗಿಯದ್ದು ಧರಿಸಿದ್ದೆ ಅನ್ನೋದು ಆಕೆಯ ಹೇಳಿಕೆ. ತಂಗಿಯ ಕೋಣೆ ಇರೋದು ಕೆಳಗಡೆ. ಮೇಲೆ ಆಕೆಯದ್ದೇ ಕೋಣೆ. ಅಲ್ಲಿಯೂ ಆಕೆಯ ಸೆಲ್ವಾರ್ ಇರಲಿಲ್ಲವೆಂದರೆ ನಂಬೋದು ಹೇಗೆ? ನಂತರ, ಸಾಕ್ಷಿಯಾಗಿ, ಪಕ್ಕದ ಕೋಣೆಯಲ್ಲಿ ತಪಾಸಣೆ ಮಾಡುವಾಗ, ಆಕೆಯ ಸೆಲ್ವಾರುಗಳನ್ನು ನಾನು ಗಮನಿಸಿದ್ದೆ. ಇರಲಿ, ಆಕೆ ದೊಡ್ಡ ಸೆಲ್ವಾರ್ ಹಾಕಿದ ಉದ್ದೇಶ ನನ್ಗೆ ಸ್ಪಷ್ಟವಾಗಿತ್ತು. ತನ್ನ ಕೈಗಳು ಕಾಣಬಾರದೆಂದು ಆಕೆ ದೊಡ್ಡ ಸೆಲ್ವಾರ್ ತೊಟ್ಟಿದ್ದಳು! ಆಕೆಯ ಕೈಗಳಲ್ಲಿ ಕೆಂಪು ಕಲೆಯಿತ್ತು!! ಆ ಕಲೆಗಳು ಆಕೆ ತಿಜೋರಿಯಿಂದ ವಜ್ರ ಅಪಹರಿಸುವಾಗ ಆಗಿದ್ದು. ನೀವು ಗಮನಿಸಿರಬೇಕು, ನಾನು ತಿಜೋರಿಯ ಮೇಲ್ಮೈಯನ್ನು ಬ್ರಷ್‌ನಿಂದ ಸ್ವಚ್ಛಗೊಳಿಸಿದ್ದೆ. ಆಗ ಒಂದು ದ್ರಾವಣವನ್ನು ಬ್ರಷ್‌ಗೆ ಲೇಪಿಸಿದ್ದೆ. ಅದು ತಿಜೋರಿಗೆ ಹೊಳಪು ನೀಡಿತು. ಆದರೆ, ಅದು ಮೈಗೆ ಸೋಕಿದರೆ, ಸೋಕಿದ ಜಾಗ ಕೆಂಪಾಗುತ್ತದೆ. ಆ ಕಲೆ ಪಕ್ಕನೆ ಹೋಗುವುದಿಲ್ಲ. ಎರಡು ಮೂರು ದಿನಗಳಾದರೂ ಬೇಕಾಗುತ್ತದೆ. ಆ ದ್ರಾವಣ ಪಕ್ಕನೆ ಗೋಚರಿಸುವುದೂ ಇಲ್ಲ! ಹಾಗಾಗಿ ವಜ್ರ ಅಪಹರಿಸಿದ್ದು ಸವಿ ಎನ್ನುವುದು ಖಚಿತವಾಯಿತು. ನಾವು ಇವತ್ತೇ ಮನೆ ಖಾಲಿ ಮಾಡಿಸುತ್ತೇವೆಂದು ಹೇಳಿದ್ದೆವಲ್ಲ. ಆದ್ದರಿಂದ ವಜ್ರಗಳನ್ನು ಮನೆಯಲ್ಲಿಡುವುದು ಸುರಕ್ಷಿತವಲ್ಲ ಎಂದು ಸವಿಗೆ ಅನಿಸಿದೆ.